ಜನರಲ್

ತಾರೀಖು 23ನೇ ಡಿಸೆಂಬರ 1895.

ನಂ. 7319.—ಲೋ. ಫಂ. 125—92.—ಅಜ್ಜಂಪುರದ ಮ್ಯುನಿಸಿಪಲ್ ಬೋರ್ಡಿನ ನಾಲ್ಕು ಮೀಟಿಂಗುಗಳಲ್ಲಿ ಅವಿಚ್ಛಿನ್ನವಾಗಿ ಗೈರ್ ಹಾಜರಾದ ಸಬಬ್ ವಜಾ ಮಾಡಲ್ಪಟ್ಟ ಮೆಸ್ಟರ್ ರುದ್ರಪ್ಪ ಶೆಟ್ಟರಿಗೆ ಬದಲಾಗಿ ಮೆಸ್ಟರ್ ಮಲ್ಲಶೆಟ್ಟಿಸುಬ್ಬಣ್ಣನವರು ಸದರೀ ಬೋರ್ಡಿನ ಮೆಂಬರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

2. ರೆವೆರೆಂಡ್ ಫಾದರ್ ಗ್ರ್ಯಾಂಡ್ಜಿಯವರು, ವರ್ಗಾಯಿಸಲ್ಪಟ್ಟ ಹೆಡ್ ಮಾಸ್ಟರ್ ಮೆಸ್ಟರ್ ಸಿ. ಕೃಷ್ಣರಾಯರಿಗೆ ಬದಲಾಗಿ ಚಿಕ್ಕಮಗಳೂರು ಮ್ಯುನಿಸಿಪಾಲಿಟಿಯ ಮೆಂಬರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

3. ಮೆಸ್ಟರ್ ಕುಪ್ಪುಸಾಮಿ ಪಿಳ್ಳೆಯವರು ತರೀಕೆರೆ ಮ್ಯುನಿಸಿಪಾಲಿಟಿಯ ಜಾಸ್ತೀ ಮೆಂಬರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 7333.—ಜ. 807.—ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆಸ್ಟರ್ ನಂಜರಾಜ ಅರಸಿನವರು, ಅವರಿಗೆ 1895ನೇ ಇಸವಿ ಅಕ್ಟೋಬರ್ 8ನೇ ಮರ್ಕ್ಕಂ 50ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಪ್ರಿವಿಲೇಜ್ ರಜಾವನ್ನು, ಅದೇ ಇಸವಿ ಅಕ್ಟೋಬರ್ 14ರ ಲಾಗಾಯತು ಉಪಯೋಗಿಸಿಕೊಂಡು, 1895ನೇ ಇಸವಿ ಡಿಸೆಂಬರ 14ನೇ ಮರ್ಕ್ಕಮಿನ ಮಧ್ಯಾಹ್ನಾತ್ಪರ ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ನಿನ ಚಾರ್ಜನ್ನು ಮೆಸ್ಟರ್ ಮಹಮ್ಮದ್‌ಜಾಫರ್ ಯವರಿಂದ ತೆಗದುಕೊಂಡಿರುತ್ತಾರೆ.

ನಂ. 7337.—ಲೋ. ಫಂ. 90—92.—ಮೆಸ್ಟರ್ ರಾಮಾನುಜಯ್ಯಂಗಾರ್ರು ತುಮಕೂರು ಡಿಸ್ಟ್ರಿಕ್ಟಿನ ಕಡಬದ ಮ್ಯುನಿಸಿಪಾಲಿಟಿಗೆ ಒಬ್ಬ ಜಾಸ್ತೀ ಮೆಂಬರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 7338.—ಲೋ. ಫಂ. 90—92.—ತುಮಕೂರು ಡಿಸ್ಟ್ರಿಕ್ಟಿನ ಕಡಬ ಮ್ಯುನಿಸಿಪಾಲಿಟಿಯಲ್ಲಿನ ವಾಯಿದೆ ಪೂರೈಸಿದ ಇದರಡಿ ಕಂಡ ಮೆಂಬರುಗಳು ಇನ್ನೂ ಐದು ವರುಷಗಳ ಪರಿಯಂತ ಮೆಂಬರಾಗಿ ಮರಳಿ ಮೊಕರರ್ಮಾಡಲ್ಪಟ್ಟಿರುತ್ತಾರೆ:—

1. ಮೆಸ್ಟರ್ ಕಾದಂಬಿ ಗರುಡಾಚಾರ್ರು.
2. ಮೆಸ್ಟರ್ ವೆಂಕಟಾಚಾರ್ರು.
3. ಮೆಸ್ಟರ್ ಗುಬ್ಬೀರಾಯಸ್ವಾಮಯ್ಯಂಗಾರ್ರು.
4. ಮೆಸ್ಟರ್ ಅನಂತರಾಮಯ್ಯಂಗಾರ್ರು.
5. ಮೆಸ್ಟರ್ ರಂಗಪ್ಪನವರು.
6. ಮೆಸ್ಟರ್ ವೆಂಕಟರಾಮಶೆಟ್ಟರು.
7. ಮೆಸ್ಟರ್ ಪಾಪಯ್ಯಾ ಶೆಟ್ಟರು.

ನಂ. 7343.—ಲೋ. ಫಂ. 372—92.—ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಇಧರಡಿ ಕಂಡ ಆಯಾ ಮ್ಯುನಿಸಿಪಾಲಿಟಿಗಳ ಮೆಂಬರುಗಳು ಅವರ ಐದು ವರುಷಗಳ ಕಾಲ ಪೂರೈಸಿರುತ್ತಾರಾಗಿ ಅವರು ಇನ್ನೂ ಐದು ವರುಷಗಳ ಪರಿಯಂತ ಪುನಃ ಮೊಕರರ್ಮಾಡಲ್ಪಟ್ಟಿರುತ್ತಾರೆ:—

ಮ್ಯುನಿಸಿಪಾಲಿಟಿಯ ಹೆಸರು.	ಮೆಂಬರುಗಳ ಹೆಸರು.
ಚಿತ್ರದುರ್ಗ	ಮೆಸ್ಟರ್ ಮಹಲಿಂಗಪ್ಪ
ಹಿರಿಯೂರು	ಮೆಸ್ಟರ್ ಬರ್ರಾಸಾಬ್
ಹೊಸದುರ್ಗ	ಮೆಸ್ಟರ್ ಬಿ. ನಂಜಪ್ಪ
ಚಳ್ಳಕೆರೆ	ಮೆಸ್ಟರ್ ಮಹಮ್ಮದಲ್ಲಿ
ಡಿಟೋ	ಮೆಸ್ಟರ್ ಮಲ್ಲಪ್ಪನಾಯಿಕ್

ನಂ. 7344.—ಲೋ. ಫಂ. 372—92.—ಮೆಸ್ಟರ್ ತುಪ್ಪದ ಉಸಮಾನಸಾಬರು, ವಾಯಿದೆ ಗತಿಸಿದ ಸಬಬ್ ನಿವೃತ್ತರಾದ ಮೆಸ್ಟರ್ ಸೈದಹುಸೇನ್ ಸಾಬರ ಬದಲಾಗಿ ಹರಿಹರ ಮ್ಯುನಿಸಿಪಾಲಿಟಿಯ ಮೆಂಬರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 26ನೇ ಡಿಸೆಂಬರ 1895.

ನಂ. 7434.—ಮಿ. 1074.—ಮೈಸೂರಿನ ಸಿವಿಲ್ ಸರ್ಜನ್‌ರಾದ ಸರ್ಜನ್ ಲೆಫ್ಟಿನೆಂಟ್ ಕರ್ನಲ್ ಪಿ. ಹೆಚ್. ಬೆನ್ಸನ್‌ಯವರು, ಮೈಸೂರು ಸಿವಿಲ್ ಸರ್ಜನ್ ಆಫೀಸು ಮತ್ತು ಶ್ರೀಮನ್ ಮಹಾರಾಣಿಯವರ ಆಸಪತ್ರೆಯ ಸೂಪರಿಂಟೆಂಡೆಂಟರ ಆಫೀಸು ವ ಮೈಸೂರು ಗವರ್ನಮೆಂಟಿನ ಕೆಮಿಕಲ್ ಯಗ್ಸಾಮಿನರ್ ಆಫೀಸು ಇವುಗಳ ಚಾರ್ಜನ್ನು 1895ನೇ ಇಸವಿ ಡಿಸೆಂಬರ 12ನೇ ಮರ್ಕ್ಕಮಿನ ಪೂರ್ವಾಹ್ನದಲ್ಲಿ ಅಸಿಸ್ಟೆಂಟ್ ಸರ್ಜನ್ ಮೆಸ್ಟರ್ ಟಿ. ವಿ. ಆರಮುಗಂ ಮೊದಲಿಯಾರ್ರಿಗೆ ಒಪ್ಪಿಸಿರುತ್ತಾರೆ.

58

ನಂ. 7113.—ರೆವಿ, ಫ. 102—95. 1894ನೇ [illegible]
-ರು 57·18 ಎಕರೆವುಳ್ಳ ಜಮೀನುಗಳು ಸರ್ಕಾರದ ಕೆಲಸಕ್ಕೆ ಅಂದರೆ ಕಡೂರು ಡಿಸ್ಟ್ರಿಕ್ಟು ಕಡೂರು ತಾಲ್ಲೂಕಿನ ಬೀರೂರು ಟವನನ್ನು ಬಿಡಾಯಿಸುವ ಬಗ್ಗೆ ಬೇಕಾಗಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಡುವಳಿದಾರನ ಹೆಸರು.	ಜಮೀನಿನ ತಪ್ಸೀಲು.					ಚೆಕ್ಕುಬಂದಿ.
				ಸರ್ವೇ ನಂಬರು.	ವಿವರಣೆ.	ವಿಸ್ತೀರ್ಣ.		ಕಂದಾಯ.	
ಕಡೂರು.	ಕಡೂರು.	ಬೀರೂರು.	ವಿರೂಪಯ್ಯನ ರುದ್ರಯ್ಯ	ಪೈಕಿ ನಂ|| 36	ಖುಷ್ಕಿ	4	17	5—8—0	ಪೂರ್ವಕ್ಕೆ—ಸರ್ವೆ ನಂಬರು 32, ಪಶ್ಚಿಮಕ್ಕೆ ಸರ್ವೇ ನಂಬರು 37, ಉತ್ತರಕ್ಕೆ ಬೀರೂರು ಟವನು, ದಕ್ಷಿಣಕ್ಕೆ ನಂಬರು 138, ಪಬ್ಲಿಕ ರಸ್ತೆ.
			ಖರೀದಿ ನಿಂಗಪ್ಪ	ಡಿಟ್ಟೋ 36	ಡಿಟ್ಟೋ	7	..	8—8—0	
			ಕಪ್ಪನಿ ಬಿನ್ ನಿಂಗಪ್ಪ	ಡಿಟ್ಟೋ 37	ಡಿಟ್ಟೋ	3	30	4—8—0	ಪೂರ್ವಕ್ಕೆ—ಸರ್ವೇ ನಂಬರು 36, ಪಶ್ಚಿಮಕ್ಕೆ ಸರ್ವೇನಂಬರು 38, ಉತ್ತರಕ್ಕೆ ಬೀರೂರು ಟವನು, ದಕ್ಷಿಣಕ್ಕೆ ಪಬ್ಲಿಕ ರಸ್ತೆ.
			ಬ್ಯಾಲಿಗ ಬಿನ್ ತಿರುಮಲಯ್ಯ	ಡಿಟ್ಟೋ 37	ಡಿಟ್ಟೋ	3	26	4—8—0	
			ಸಯ್ಯದ್ ಇಬ್ರಹೀಂಸಾಬ್	38	ಡಿಟ್ಟೋ	1	15	5—0—0	ಪೂರ್ವಕ್ಕೆ—ನಂಬರು 37, ಪಶ್ಚಿಮಕ್ಕೆ ಪಬ್ಲಿಕ ರಸ್ತೆ, ಉತ್ತರಕ್ಕೆ ಬೀರೂರು ಟವನು, ದಕ್ಷಿಣಕ್ಕೆ ನಂಬರು 138.
			ವೆಂಕಟಶೆಟ್ಟಯ್ಯ	ಪೈಕಿ ನಂ|| 39	ಡಿಟ್ಟೋ	..	28	1—0—0	ಪೂರ್ವಕ್ಕೆ—ಸರ್ವೇ ನಂಬರು 38, ಪಶ್ಚಿಮಕ್ಕೆ ಸರ್ವೇ ನಂಬರು 39, (ಕಟ್ಟೆ), ಉತ್ತರಕ್ಕೆ ಬೀರೂರು ಟವನು, ದಕ್ಷಿಣಕ್ಕೆ ಸರ್ವೇ ನಂಬರು 40.
			ವಿರೂಪಯ್ಯನ ರುದ್ರಯ್ಯ	ಡಿಟ್ಟೋ 39	ಡಿಟ್ಟೋ	..	27	0—12—0	
			ನಾಗಯ್ಯ ರಾಮಣ್ಣ	41	ಡಿಟ್ಟೋ	6	37	8—8—0	ಪೂರ್ವಕ್ಕೆ—ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸರ್ವೇ ನಂಬರು 40, ದಕ್ಷಿಣಕ್ಕೆ ರಸ್ತೆ.
			ಈರಯ್ಯ	31	ಡಿಟ್ಟೋ	8	38	12—0—0	ಪೂರ್ವಕ್ಕೆ—ಕಾವಲು, ಪಶ್ಚಿಮಕ್ಕೆ ಬೀರೂರು ಟವನು, ಉತ್ತರಕ್ಕೆ ಕಾವಲು, ದಕ್ಷಿಣಕ್ಕೆ ಸರ್ವೆ ನಂಬರು 32.
			ಹಾಲಪ್ಪ	ಪೈಕಿ ನಂ|| 32	ಡಿಟ್ಟೋ	6	5	8—0—0	ಪೂರ್ವಕ್ಕೆ—ಕಾವಲು, ಪಶ್ಚಿಮಕ್ಕೆ ಸರ್ವೇ ನಂಬರು 36, ಉತ್ತರಕ್ಕೆ ಸರ್ವೇ ನಂಬರು 31, ದಕ್ಷಿಣಕ್ಕೆ ಕಾವಲು.
			ವೀರತ್ತಯ್ಯ	ಡಿಟ್ಟೋ 33	ಡಿಟ್ಟೋ	6	15	8—0—0	
			ಸಪ್ಪಾರಿ ಬಂಜಾರು	53	ಡಿಟ್ಟೋ	4	20	4—0—0	ಪೂರ್ವಕ್ಕೆ—ರೈಲ್ ರಸ್ತೆ, ಪಶ್ಚಿಮಕ್ಕೆ ಪಬ್ಲಿಕ ರಸ್ತೆ, ಉತ್ತರಕ್ಕೆ ಸರ್ವೇ ನಂಬರು 105, ದಕ್ಷಿಣಕ್ಕೆ ಸರ್ವೇ ನಂಬರು 49 (ಕಟ್ಟೆ).
						57	18	70—4—0	

ತಾರೀಖು 26ನೇ ಡಿಸೆಂಬರ್ 1895.

ನಂ. 209.—ಡಿ. ಸಿ.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಗವರನ್‌ಮೆಂಟ ಮಿಲಿಟರಿ ಸೆಕ್ರಟರಿ ವ ಮೈಸೂರು ಫೌಜಿನ ಕಮ್ಯಾನ್‌ಡೆಂಟರಾದ ಲೆಫ್ಟಿನೆಂಟ ಕರ್ನಲ್ ಎ. ಹೆಚ್. ಮೆಕ್ಕಿನ್‌ಟಯರ್ ಯವರಿಗೆ, 1896ನೇ ಇಸವಿ ಜನವರಿ 6ನೇ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 211.—ಡಿ. ಸಿ. ಶ್ರೀಮನ್ ಮಹಾರಾಣಿ ರೀಜಂಟರವರು, ಮೈಸೂರು ಯಿಂಪೀರಿಯಲ್ ಸರ್ವಿಸ್ ಕ್ಯಾವೆಲ್ರಿ ಫೌಜಿನ ಕಮ್ಯಾನ್‌ಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ. ದೇಶರಾಜ ಅರಸಿನವರಿಗೆ, ಲೆಫ್ಟಿನೆಂಟ್ ಕರ್ನಲ್ ಎ. ಹೆಚ್. ಮೆಕ್ಕಿನ್‌ಟಯರ್‌ಯವರು ಪ್ರಿವಿಲೀಜ್ ರಜಾದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ, ಅವರ ಕೆಲಸಗಳೊಂದಿಗೆ ಮಿಲಿಟರಿ ಸೆಕ್ರಟರಿಯಾಗಿಯೂ, ಮೈಸೂರು ಫೌಜಿನ ಕಮ್ಯಾನ್‌ಡೆಂಟರಾಗಿಯೂ ಆಕ್ಟಿಂಗ್ ತರೀಕ ಕೆಲಸ ನೋಡತಕ್ಕದ್ದೆಂದು ನಿಯಮಿಸಿರುತ್ತಾರೆ.

ತಾರೀಖು 3ನೇ ಜನವರಿ 1896.

ನಂ. 7464.—ಜು. 834.—ಮೈಸೂರು ದೇಶದ ಪೋಲೀಸ್ ಇನ್‌ಸ್ಪೆಕರ್ ಜನರಲ್‌ರಾದ ಮಿಸ್ಟರ್ ವಿ. ಪಿ. ಮಾಧವರಾಯರವರು, 1896ನೇ ಇಸವಿ ಜನವರಿ 6ನೇ ಮುರ್ಕುಂ ಲಾಗಾಯತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ಮಿಸ್ಟರ್ ಮಾಧವರಾಯರ ಗೈರ್‌ಹಾಜರಿಯಲ್ಲಿ, ಪೋಲೀಸ್ ಸೂಪರಿನ್‌ಟೆಂಡೆಂಟರಾದ ಮಿಸ್ಟರ್ ಕೆ. ಪಿ. ಪುಟ್ಟಣ್ಣಶೆಟ್ಟಿಯವರು ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರ ಚಾಲತಿ ಕೆಲಸದ ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 6ನೇ ಜನವರಿ 1896.

ನಂ. 7500.—ಜು. 839.—ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರಿನ ಮುನಸಿಫ್ ಮಿಸ್ಟರ್ ಬಿ. ಶ್ರೀನಿವಾಸರಾಯರಿಗೆ, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 203 ವ 204ನೇ ಆರ್ಟಿಕಲ್‌ಗಳನುಸರಿಸಿ, 1896ನೇ ಇಸವಿ ಜನವರಿ 6ನೇ ತಾರೀಖಿನಾರಭ್ಯ ಪೂರಾ ತಲಬಿನ ಮೇಲೆ 11 ದಿವಸಗಳು ಮತ್ತು ಅರ್ಧ ತಲಬಿನ ಮೇಲೆ 19 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮಿಸ್ಟರ್ ಶ್ರೀನಿವಾಸರಾಯರ ಗೈರ್ ಹಾಜರೀ ಕಾಲದಲ್ಲಿ, ನಗರ ಡಿವಿಜನ್ ಡಿಸ್ಟ್ರಿಕ್ಟು ವ ಸೆಷನ್ ಕೋರ್ಟಿನ ಶಿರಸ್ತೇದಾರ್ ಮಿಸ್ಟರ್ ರಾಮಾನುಜಯ್ಯಂಗಾರ್ರು ಕಡೇದರ್ಜೇ ಮುನಸಿಫರಾಗಿ ಆಕ್ಟಿಂಗ್ ತರೀಕೆ ಕೆಲಸ ನೋಡತಕ್ಕದ್ದು.

ತಾರೀಖು 7ನೇ ಜನವರಿ 1896.

ನಂ. 7570.—ಮಿ. 1096—ಫೆಬ್ರುವರಿ ಗುರ್ರೇ ತಾರೀಖು ಮೈಸೂರು ಶ್ರೀಮನ್ ಮಹಾರಾಜರವರು ಪಟ್ಟಾಭಿಷಿಕ್ತರಾದ ಶುಭದಿನವಾದುದರಿಂದ ಆ ದಿವಸ ಸಂಸ್ಥಾನಮುಳಿ ವಟ್ಟು ರಜಾ ದಿವಸವೆಂದು ಆಚರಿಸಲ್ಪಡತಕ್ಕದ್ದು.

ನಂ. 7549.—ಮಿ. ಫೈ. 153—92—ಮೈಸೂರು ಶ್ರೀಮನ್ಮಹಾರಾಣಿಯವರ ಆಸ್ಪತ್ರೆಯ ಮೂರನೇ ಗ್ರೇಡ್ ಅಸಿಸ್ಟೆಂಟ ಸರ್ಜನ್ ಮಿಸ್. ಆರ್. ಗೋವಿಂದ ರಾಜಲುಯವರಿಗೆ, 1884ನೇ ಇಸವಿ ಮೇ 5ನೇ ಮುರ್ಕುಂ 885—7ನೇ ನಂಬರ್ ಗವರನ್‌ಮೆಂಟ್ ಪ್ರೊಸೀಡಿಂಗ್ಸಿನ ಷರತ್ತುಗಳನುಸರಿಸಿ ಅವರು ಮೂರನೇ ಗ್ರೇಡಿನಲ್ಲಿ ಏಳುವರುಷಗಳ ನೌಕರಿ ಪೂರೈಸಿದ ತಾರೀಖು ಅಂದರೆ 1894ನೇ ಇಸವಿ ಅಕ್ಟೋಬರ್ ಗುರ್ರೇ ತಾರೀಖು ಮೊದಲು ಯರಡನೇ ಗ್ರೇಡ್ ಅಸಿಸ್ಟೆಂಟ್ ಸರ್ಜನ್ ಕೆಲಸಕ್ಕೆ ಬಡ್ತಿ ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ವಿ. ಎನ್. ನರಸಿಂಹಯ್ಯಂಗಾರ್,
ಜನರಲ್ ಸೆಕ್ರೆಟರಿ.

ಮಿಲಿಟರಿ.

ತಾರೀಖು 31ನೇ ಡಿಸೆಂಬರ್ 1895.

ಶ್ರೀಮನ್ ಮಹಾರಾಣಿ ರೀಜಂಟ್ ಸಿ. ಐ. ಯವರು, ಜಮಾದಾರ್ ಲಿಂಗರಾಜ ಅರಸಿನವರನ್ನು, ಪೆನ್ಷನ್ ಮೇಲೆ ಕೆಲಸದಿಂದ ನಿವೃತ್ತರಾದ ಖಾನ್‌ಬಹದೂರ್ ಬುದರುದ್ದೀನ್ ಯವರಿಗೆ ಬದಲಾಗಿ, 1896ನೇ ಇಸವಿ ಜನವರಿ 1ನೇ ತಾರೀಖಿನಾರಭ್ಯ ಶ್ರೀಮನ್ ಮಹಾರಾಜರವರ ಖಾಸ್ ಬಾಡೀಗಾರ್ಡಿನ ಕಮ್ಯಾನ್‌ಡೆಂಟರಾಗಿ ಮೊಕರರ್ ಮಾಡಿರುತ್ತಾರೆ.

ಹುಕುಂ ಬಮೋಜಿಬ್,
ಜೆ. ದೇಶೀರಾಜ್ ಅರಸ್,
ಲೆ॥ ಕರ್ನಲ್ ವ ಆ॥ ಮಿಲಿಟರಿ ಸೆಕ್ರಟರಿ.